Bus Shelters in Bangalore Civil Area

167. Sri K. R. SRINIVASULU NAYUDU (Shanthinagar)—

Will the Minister for Transport and Tourism be pleased to state :—

(*a*) the reasons for not providing sufficient bus shelters in civil area of Bangalore ;

(*b*) the action the Government proposed to take to provide bus shelters and mitigate the hardships caused to the passengers and the general public ?

Sri N. CHIKKEGOWDA (Minister forAgriculture and Animal Husbandary) [On behalf of SRI MOHAMMED ALI (Minister for Transport and Tourism)]—

(*a*) Shelters are being provided under a phased programme.

(*b*) The Karnataka State Road Transport Corporation propose to construct additional shelters.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ಸ್ವಾಮಿ, ನಾನು ಕೇಳಿರುವುದು ಸಿವಿಲ್ ಪ್ರದೇಶದಲ್ಲಿ ಎಷ್ಟು ಬಸ್ ಶೆಲ್ಟರ್‌ಗಳಿವೆ ಎಂದು. ತಾವು ಹೇಳಿದಿರಿ. ಹಂತಹಂತವಾಗಿ ತೆಗೆದು ಕೊಳ್ಳುತ್ತೇವೆ ಎಂದು. ತಮಗೆ ಗೊತ್ತಿದೆ ಇಲಾಖೆಯವರು 15-20 ವರ್ಷಗಳಿಂದ ಕೆಲಸಮಾಡುತ್ತಿದ್ದಾರೆ. ಇನ್ನೂ ಹಂತಹಂತವಾಗಿ ಮಾಡುತ್ತೇವೆ ಎಂದು ಹೇಳುತ್ತಿದ್ದೀರ ಆ ಏರಿಯಾದಲ್ಲಿ ಬಸ್ ಷೆಲ್ಟರ್ ಮಾಡಬೇಕಾದರೆ ತಾವು ಅನುಸರಿಸತಕ್ಕಂಥ ನೀತಿನಿಯಮಗಳೇನು ಎನ್ನುವ ವಿವರಣೆಯನ್ನು ಕೊಡುತ್ತೀರಾ ?

† ಶ್ರೀ ಎನ್. ಚಿಕ್ಕೇಗೌಡ.—ಬಸ್ ಷೆಲ್ಟರ್‌ಗಳನ್ನು ಕಟ್ಟಬೇಕಾದರೆ ಆಯಾಯ ಪ್ರದೇಶದಲ್ಲಿ ಎಷ್ಟು ಬಸ್‌ಗಳು ಓಡಾಡುತ್ತವೆ ಮತ್ತು ಆಲ್ಲಿ ಟ್ರಾಫಿಕ್ ಎಷ್ಟು ಎಂಬ ಅಂಶದ ಆಧಾರದ ಮೇಲೆ ಬಸ್ ಷೆಲ್ಟರ್‌ಗಳನ್ನು ಕಟ್ಟುತ್ತೇವೆ. ಘನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ 180 ರೂಟ್‌ಗಳಿವೆ. ಆದರಲ್ಲಿ 20 ರೂಟ್‌ಗಳು ಮಾತ್ರ ಸಿವಿಲ್ ಏರಿಯಾದಲ್ಲಿವೆ. 110 ರೂಟ್‌ಗಳು ಸಿಟಿ ಏರಿಯಾದಲ್ಲಿವೆ. ಮಿಕ್ಕ 50 ರೂಟ್‌ಗಳು ಸಿಟಿ ಮತ್ತು ಸಿವಿಲ್ ಏರಿಯಾ ಲಿಂಕ್ ಪ್ರದೇಶದಲ್ಲಿವೆ. ಇವುಗಳ ಆಧಾರದ ಮೇಲೆ ಬಸ್ ಷೆಲ್ಟರ್‌ಗಳನ್ನು ಕಟ್ಟತಕ್ಕ ಂಥಾದ್ದು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ತಮ್ಮ ಉತ್ತರದಿಂದ ಸಿವಿಲ್ ಏರಿಯಾದಲ್ಲಿ ಕೇವಲ 20 ರೂಟ್ ಇವೆ ಎಂದು ಖಚಿತವಾಗಿ ಅರ್ಥವಾಗುತ್ತದೆ. ಅಲಸೂರಿನಲ್ಲಿ ಬಸ್ ಷೆಲ್ಟರ್ ಇಲ್ಲ. ಮತ್ತು ಮಳೆಗಾಲದಲ್ಲಿ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಹೀಗಿರುವುದರಿಂದ ಒಂದು ಕಮಿಟಿಯನ್ನಾದರೂ ಏರ್ಪಾಡು ಮಾಡಿ ಜಾಗ್ರತೆ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಎರಡು ಮಾತಿಲ್ಲ. ಮುಂದಿನ ವರ್ಷ 50 ಬಸ್ ಷೆಲ್ಟರ್ ಕಟ್ಟಬೇಕು ಎಂದು ಯೋಚನೆ ಮಾಡಿದ್ದೇವೆ. ಅದರಲ್ಲಿ ಸಿವಿಲ್ ಏರಿಯಾದಲ್ಲಿ ಎಷ್ಟು ಕಟ್ಟಬೇಕು, ಸಿಟಿ ಏರಿಯಾದಲ್ಲಿ ಎಷ್ಟು ಕಟ್ಟಬೇಕು ಎನ್ನುವುದನ್ನು ರೂಟ್‌ಗಳ ಆಧಾರದ ಮೇಲೆ ಕಟ್ಟುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ನಿಮ್ಮ ಜೊತೆಗೆ ಲಯನ್ಸ್ ಕ್ಲಬ್ ಹಾಗೂ ರೋಟರಿ ಕ್ಲಬ್‌ನವರು ಕಟ್ಟುವುದಕ್ಕೆ ಮುಂದೆ ಬಂದರೆ ಜಾಗ ಕೊಡಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಖಂಡಿತವಾಗಿ. ಪರಿಶೀಲಿಸುತ್ತೇವೆ.